# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: | 406 |
| 2) | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | :: | ಶ್ರೀ ಪ್ರತಾಪ್‌ಸಿಂಹ ನಾಯಕ್. ಕೆ.,<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸುವ ದಿನಾಂಕ | :: | 12/12/2024 |
| 4) | ಉತ್ತರಿಸುವ ಸಚಿವರು | :: | ಮಾನ್ಯ ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಡ್ರಗ್ಸ್ ಮಾರಾಟ ದಂಧೆ ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ರಾಜ್ಯದಲ್ಲಿ ಡ್ರಗ್ಸ್ ಮಾರಾಟ ದಂಧೆ ಕುರಿತಾಗಿ ವರದಿಯಾಗುವ ಪ್ರಕರಣಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ಎಫ್.ಐ.ಆರ್.ಗಳನ್ನು ದಾಖಲಿಸಿಕೊಂಡು, ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಡ್ರಗ್ಸ್ ಮಾರಾಟ ದಂಧೆಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಪರಿಣಾಮಕಾರಿ ಹಾಗೂ ಕಠಿಣ ಕ್ರಮಗಳೇನು ; | ರಾಜ್ಯದಲ್ಲಿ ಮಾದಕ ವಸ್ತುಗಳ ಮಾರಾಟ, ಸಾಗಾಣೆ ಮತ್ತು ಸೇವನೆಯನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ತೆಗೆದುಕೊಂಡಿರುವ ಕ್ರಮಗಳು ಈ ಕೆಳಕಂಡಂತಿರುತ್ತದೆ:<br>➢ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಡಿಜಿಪಿ (ಸೈಬರ್ & ನಾರ್ಕೋಟಿಕ್ಸ್) ಶ್ರೇಣಿಯಲ್ಲಿ ಹುದ್ದೆಯನ್ನು ಸೃಜಿಸಲಾಗಿದ್ದು, ಎ.ಎನ್.ಟಿ.ಎಫ್‌ನ ಮುಖ್ಯಸ್ಥರು ಹಾಗೂ ರಾಜ್ಯ ನೋಡಲ್ ಅಧಿಕಾರಿಗಳಾಗಿರುತ್ತಾರೆ.<br>➢ ಅಕ್ರಮವಾಗಿ ಬೆಳಸಲಾಗುವ ಮಾದಕ ಬೆಳೆಗಳನ್ನು ಗುರುತಿಸಿ ನಾಶಪಡಿಸುವ ಸಲುವಾಗಿ ಎನ್.ಸಿ.ಬಿ, ನವದೆಹಲಿಯವರು ಅಭಿವೃದ್ಧಿ ಪಡಿಸಿರುವ MAPDRUGS (NCB Mobile Application / Web Portal) ನ್ನು ಉಪಯೋಗಿಸುವ ಕುರಿತು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳ ಕಾರ್ಯಕಾರಿ ಸಿಬ್ಬಂದಿಗಳಿಗೆ ಆನ್‌ಲೈನ್ ತರಬೇತಿಯನ್ನು ನೀಡಲಾಗಿರುತ್ತದೆ.<br>➢ ರಾಜ್ಯದ ಡಿ.ವೈ.ಎಸ್.ಪಿಗಳು, ಪೊಲೀಸ್ ಠಾಣೆಗಳ ಪೊಲೀಸ್ ನಿರೀಕ್ಷಕರು ಹಾಗೂ ಸಿಬ್ಬಂದಿಗಳಿಗೆ ಮಾದಕ ವಸ್ತು ವಿಷಯಕ್ಕೆ ಸಂಬಂಧಿಸಿದ ಪ್ರಕರಣಗಳ ತನಿಖೆಯಲ್ಲಿ ಕಾರ್ಯಕ್ಷಮತೆ (Capacity building) ಹೆಚ್ಚಿಸುವ ಸಲುವಾಗಿ ಎನ್.ಸಿ.ಬಿ ಹಾಗೂ ಇತರೆ ಸಂಸ್ಥೆಯವರೊಂದಿಗೆ ಕೂಡಿ ಅನೇಕ ಕಾರ್ಯಾಗಾರಗಳನ್ನು ಆಯೋಜಿಸಲಾಗಿರುತ್ತದೆ.<br>➢ ಈ ಕಾರ್ಯಾಗಾರಗಳಲ್ಲಿ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳು ಹಾಗೂ ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತಿದೆ.<br>➢ ಠಾಣಾ ತನಿಖಾ ಸಹಾಯಕರಿಗೆ ಮಾದಕ ವಸ್ತುವಿನ ವಿಷಯದ ಕುರಿತು ತರಬೇತಿ ನೀಡಲು ಟ್ರೈನಿಂಗ್ ಆಫ್ ಟ್ರೈನರ್ಸ್ (TOT) ತರಬೇತಿಗೆ ಸಿಐಡಿ ಅಧಿಕಾರಿಗಳನ್ನು ಸಿಎಪಿಟಿ, ಭೂಪಾಲ್ ಇಲ್ಲಿಗೆ ಕಳುಹಿಸಿ ತರಬೇತಿ ನೀಡಲಾಗಿರುತ್ತದೆ. ಅಂತೆಯೇ ಪೊಲೀಸ್ ತರಬೇತಿ ಶಾಲೆಗಳಲ್ಲೂ ಪೊಲೀಸ್ ಸಿಬ್ಬಂದಿಗಳಿಗೆ ಎನ್.ಡಿ.ಪಿ.ಎಸ್ ಕಾಯ್ದೆ ಕುರಿತಾಗಿ ಭೋದನೆ ನೀಡಲಾಗುತ್ತಿದೆ.<br>➢ ಬೆಂಗಳೂರು ನಗರ ಪೊಲೀಸರು ಮೇಲಿಂದ ಮೇಲೆ ವಿದೇಶಿಯರ ನೆಲೆಗಳ ಮೇಲೆ ದಾಳಿಗಳನ್ನು ಕೈಗೊಂಡು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ವಿದೇಶಿಯರ ಮೇಲೆ ಪ್ರಕರಣ ದಾಖಲು ಮಾಡುವುದಲ್ಲದೆ ವೀಸಾ ಮತ್ತು ಪಾಸ್‌ಪೋರ್ಟ್ ಅವಧಿ ಮುಗಿದ ವಿದೇಶಿಯರನ್ನು ಅವರ ದೇಶಕ್ಕೆ ಕಳುಹಿಸಲು ಡಿಟೆನ್ಷನ್ ಸೆಂಟರ್‌ಗಳಲ್ಲಿ ಸೇರಿಸಲಾಗುತ್ತಿದೆ ಹಾಗೂ ಎಫ್.ಆರ್.ಆರ್.ಓ ರವರ ಮೂಲಕ ಸದರಿಯವರ ದೇಶಕ್ಕೆ ವಾಪಸ್ಸು ಕಳುಹಿಸಲು ಕ್ರಮ ಕೈಗೊಳ್ಳಲಾಗಿದೆ. |

<table>
<tr>
<td></td>
<td></td>
<td>
➢ ಸಾರ್ವಜನಿಕರಿಂದ ಮಾದಕ ವಸ್ತುಗಳ ಬಗ್ಗೆ ರಹಸ್ಯ ಮಾಹಿತಿಗಳನ್ನು ಸಂಗ್ರಹಿಸಲು ಟೋಲ್ ಫ್ರೀ ಸಂಖ್ಯೆ. 1908 ದೂರವಾಣಿಯ ಮುಖಾಂತರ ಸಂಪರ್ಕಿಸಿ ಮಾಹಿತಿ ನೀಡುವ ಯೋಜನೆ ಪ್ರಾರಂಭಿಸಲಾಗಿದೆ.<br>
➢ ಒಂದು ಬಾರಿಗಿಂತ ಹೆಚ್ಚು ಬಾರಿ ಎನ್.ಡಿ.ಪಿ.ಎಸ್. ಪ್ರಕರಣಗಳಲ್ಲಿ ಭಾಗಿಯಾದ ವಿದೇಶೀಯರ ವಿರುದ್ಧ PIT-NDPS (The Prevention of Illicit Traffic in Narcotic Drugs and Psychotropic Substances Act) ಅಡಿಯಲ್ಲಿ ಬಂಧನದ ಆದೇಶ ಮಾಡಲಾಗುತ್ತಿದೆ.
</td>
</tr>
<tr>
<td>ಇ)</td>
<td>2024ನೇ ಸಾಲಿನಲ್ಲಿ ಡ್ರಗ್ಸ್ ಮಾರಾಟ ದಂಧೆಯಲ್ಲಿ ಭಾಗಿಯಾಗಿರುವವರ ವಿರುದ್ಧ ಇದುವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ ಹಾಗೂ ಪ್ರಸ್ತುತ ವಿಚಾರಣೆಗಳು ಯಾವ ಹಂತದಲ್ಲಿವೆ ;</td>
<td>
2024ನೇ ಸಾಲಿನಲ್ಲಿ ಡ್ರಗ್ಸ್ ಮಾರಾಟ ದಂಧೆಯಲ್ಲಿ ಭಾಗಿಯಾಗಿರುವವರ ವಿರುದ್ಧ ಎನ್.ಡಿ.ಪಿ.ಎಸ್.ಕಾಯ್ದೆ ಅನ್ವಯ ದಾಖಲಿಸಿರುವ ಪ್ರಕರಣಗಳ ಸಂಖ್ಯೆ, ಪ್ರಸ್ತುತ ವಿಚಾರಣೆಯ ಮತ್ತು ತನಿಖಾ ಹಂತದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ :
<table>
<tr><th>ವರ್ಷ</th><th>ವರದಿ</th><th>ನ್ಯಾಯಾಲಯದ ವಿಚಾರಣೆ</th><th>ತನಿಖೆ</th></tr>
<tr><td>2024 (ನವೆಂಬರ್-30)</td><td>3565</td><td>1999</td><td>960</td></tr>
</table>
</td>
</tr>
<tr>
<td>ಈ)</td>
<td>ಕಾಲೇಜು ವಿದ್ಯಾರ್ಥಿಗಳೇ ಬಹುಮುಖ್ಯವಾಗಿ ಡ್ರಗ್ಸ್ ಜಾಲಕ್ಕೆ ಬಲಿಯಾಗುತ್ತಿರುವ ಹಲವಾರು ಪ್ರಕರಣಗಳಲ್ಲಿ ಕಂಡು ಬಂದಿದ್ದು, ಆ ಕುರಿತು ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಹಾಗೂ ಸುರಕ್ಷಿತ ಕ್ರಮಗಳೇನು ?</td>
<td>
ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನದಿಂದ ದೂರವಿರಲು ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತಿರುತ್ತದೆ :<br>
➢ ಪೊಲೀಸ್ ಇಲಾಖಾ ವತಿಯಿಂದ ಡಿಸೆಂಬರ್ 2023ರ ಮಾಹೆಯಲ್ಲಿ ವಿಶೇಷ ಕಾರ್ಯಾಚರಣೆಯನ್ನು ಕೈಗೊಂಡು 2409 ಶಾಲಾ ಕಾಲೇಜುಗಳಲ್ಲಿ 3,95,253 ಶಾಲಾ ಕಾಲೇಜು ಮಕ್ಕಳಿಗೆ ಬೋಧನೆ<br>
➢ ಜೂನ್ 2024 ರಲ್ಲಿ ಕೈಗೊಂಡ ವಿಶೇಷ ಕಾರ್ಯಚರಣೆಯಲ್ಲಿ 3602 ಶಾಲಾ ಕಾಲೇಜುಗಳಲ್ಲಿ 5.5 ಲಕ್ಷ ಶಾಲಾ ಕಾಲೇಜು ಮಕ್ಕಳಿಗೆ ಬೋಧನೆ<br>
➢ ಜೂನ್ 26, 2024 ರಂದು ಡ್ರಗ್ಸ್ ದುರುಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಅಂತರಾಷ್ಟ್ರೀಯ ದಿನಾಚರಣೆಯಂದು ಸುಮಾರು 4000 ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಬೋಧನೆ.<br>
➢ ಸರ್ಕಾರದ ವತಿಯಿಂದ Drugs Free Karnataka Mobile App ಅನ್ನು ಬಿಡುಗಡೆಗೊಳಿಸಲಾಗಿದೆ.<br>
ಇದಲ್ಲದೆ ಸರ್ಕಾರವು ಯುವ ಜನತೆಯಲ್ಲಿ ಗಾಂಜಾ ಸೇವನೆ ತಡೆಯಲು ಮತ್ತು ಈ ನಂಟಿನಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಮತ್ತು ಅಪರಾಧ ಕೃತ್ಯಗಳನ್ನು ನಿಯಂತ್ರಿಸಲು ಹಲವು ಕ್ರಮಗಳನ್ನು ಕೈಗೊಂಡಿದೆ.
</td>
</tr>
</table>

ಒಇ 44 ಪಿಎನ್‌ಡಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು